# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1539 |
| ಮಾನ್ಯ ಸದಸ್ಯರ ಹೆಸರು | : | ಡಾ: ತಳವಾರ್ ಸಾಬಣ್ಣ |
| ಉತ್ತರಿಸುವ ದಿನಾಂಕ | : | 21-03-2025 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ನಗರದಲ್ಲಿ ರಿಂಗ್ ರೋಡ್ ನಿಂದ ಅಳಂದಾಗೆ ಹೋಗುವ ರಸ್ತೆಯಲ್ಲಿ ಮತ್ತು ಶಹಾಬಾದ ರಸ್ತೆಯಲ್ಲಿ ಮುಳ್ಳು ಗಂಟೆಗಳು ಹಾಗೂ ತ್ಯಾಜ್ಯಗಳ ಮತ್ತು ಮಧ್ಯ ಜೋಪಡಿ ಹಾಕಿಕೊಂಡು ಅಲೆಮಾರು ಕುಟುಂಬಗಳನ್ನು ಸರ್ಕಾರ ಗಮನಿಸಿದೆಯೇ; | ಗಮನಕ್ಕೆ ಬಂದಿರುತ್ತದೆ. |
| ಆ) | ಕನಿಷ್ಠ ಸೌಕರ್ಯಗಳಿಲ್ಲದೆ, ಯಾವುದೇ ರಕ್ಷಣೆ ಇಲ್ಲದೆ ರಾತ್ರಿ ಕುಟುಂಬದ ಸದಸ್ಯರೊಂದಿಗೆ ಬದುಕುತ್ತಿರುವ ಅಲೆಮಾರಿಗಳು ವಸತಿ, ಶೌಚಾಲಯಗಳು, ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳನ್ನು ಒದಗಿಸುವುದರ ಕುರಿತು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; | ಶಹಬಾದ್ ರಿಂಗ್ ರಸ್ತೆಯಲ್ಲಿರುವ ಅಲೆಮಾರಿ ಜನಾಂಗದ ಕುಟುಂಬದವರು ವಾಸಿಸುತ್ತಿರುವ ಶ್ರೀನಗರ ಕ್ರಾಸ್‌ದಿಂದ ಬುಡ್ಡ ಜಂಗಮ ಕಾಲೋನಿವರೆಗೆ ಕಲಬುರಗಿ ಗ್ರಾಮೀಣ ಶಾಸಕರ ಪರಿಶಿಷ್ಟ ಜಾತಿ ಕಾಲೋನಿ ಅಭಿವೃದ್ಧಿ ಯೋಜನೆ ಅಡಿ ಸಿ.ಸಿ. ರಸ್ತೆ ನಿರ್ಮಾಣ ಮಾಡಲಾಗಿರುತ್ತದೆ.<br><br>ಕಲಬುರಗಿ ನಗರದಿಂದ ಆಳಂದಗೆ ಹೋಗುವ ರಸ್ತೆಯಲ್ಲಿರುವ ರಾಣೇಶ್ ಪೀರ್ ದರ್ಗಾದ ಹತ್ತಿರ ವಾಸವಿರುವ ಅಲೆಮಾರಿ ಜನಾಂಗದ ಸ್ಥಳಕ್ಕೆ ಮುಖ್ಯ ರಸ್ತೆಯಿಂದ ಹೋಗಲು ಕೆ.ಕೆ.ಆರ್.ಡಿ.ಬಿ ಅನುದಾನದಲ್ಲಿ ರಸ್ತೆ ಮಂಜೂರು ಮಾಡಲಾಗಿರುತ್ತದೆ.<br><br>ಶಹಬಾದ್ ನಗರದಲ್ಲಿ 81 ಅಲೆಮಾರಿ ಸಮುದಾಯದ ಕುಟುಂಬಗಳಿಗೆ ವಸತಿ ಸೌಲಭ್ಯವನ್ನು ಈಗಾಗಲೇ ಮಂಜೂರು ಮಾಡಿದ್ದು ಮನೆ ನಿರ್ಮಾಣ ಸಹ ಪೂರ್ಣಗೊಂಡಿರುತ್ತದೆ.<br><br>ಕಲಬುರಗಿ ಜಿಲ್ಲೆ ಕಲಬುರಗಿ ತಾಲ್ಲೂಕಿನ ಶರಣಸಿರಸಗಿ ಗ್ರಾಮದ ಸರ್ವೆ ನಂ. 194 ರ 5 ಎಕರೆ 04 ಗುಂಟೆ ಜಮೀನನ್ನು ನಿವೇಶನಗಳಾಗಿ ಪರಿವರ್ತಿಸಿ ಅಲೆಮಾರಿ ಸಮುದಾಯದ 214 ಫಲಾನುಭವಿಗಳಿಗೆ ಈಗಾಗಲೇ ನಿಗಮದಿಂದ ಹಕ್ಕು ಪತ್ರಗಳನ್ನು ವಿತರಿಸಲಾಗಿರುತ್ತದೆ. ಹಾಗೂ ಸದರಿ ಜಮೀನಿನಲ್ಲಿ ಮನೆ ನಿರ್ಮಾಣಕ್ಕಾಗಿ ಈಗಾಗಲೇ ರಾಜೀವ್‌ಗಾಂಧಿ ವಸತಿ ನಿಗಮದ ಲಾಗಿನ್‌ನಲ್ಲಿ ಫಲಾನುಭವಿಗಳ ಮಾಹಿತಿಯನ್ನು ಇಂದೀಕರಿಸಲಾಗಿದೆ. |

---2

| | | |
|---|---|---|
| | | ಶಿಕ್ಷಣಕ್ಕೆ ಸಂಬಂಧಿಸಿದಂತೆ, ಕಲಬುರಗಿ ಜಿಲ್ಲೆಯಲ್ಲಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಅಡಿ ಬರುವ ವಸತಿ ಶಾಲೆಗಳಲ್ಲಿ 6 ನೇ ತರಗತಿಗೆ 34 ಮತ್ತು 7 ನೇ ತರಗತಿಗೆ 15 ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿರುತ್ತದೆ. ಅಲ್ಲದೇ, ಸಮಾಜ ಕಲ್ಯಾಣ ಇಲಾಖೆ ವಸತಿ ನಿಲಯಗಳಲ್ಲಿ ಅಲೆಮಾರಿ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗಿರುತ್ತದೆ. |
| **ಇ)** | ಸರ್ಕಾರ ಈ ಅಲೆಮಾರಿ ಕುಟುಂಬಗಳು ವಾಸಿಸುತ್ತಿರುವ ಜಾಗವನ್ನು ಅವರ ಹೆಸರಿಗೆ ವರ್ಗಾಯಿಸಿ ಹಕ್ಕು ಪತ್ರಗಳನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ಅಲೆಮಾರಿ ಕುಟುಂಬಗಳು ವಾಸಿಸುತ್ತಿರುವ ಜಾಗವನ್ನು ಸ್ಥಳ ಪರಿಶೀಲನೆ ಮಾಡಿ ಸದರಿ ಜಾಗವನ್ನು ಅವರ ಹೆಸರಿಗೆ ನೊಂದಾಯಿಸಿ ಹಕ್ಕು ಪತ್ರ ನೀಡುವ ಕುರಿತು ನಿಯಮಾನುಸಾರ ಪರಿಶೀಲಿಸಲಾಗುವುದು. |
| **ಈ)** | ಹೆಸರಿಗೆ ಮಾತ್ರ ಇರುವ ಅಲೆಮಾರಿ ಇಲಾಖೆ ಅಲೆಮಾರಿ ಸಮುದಾಯಕ್ಕಾಗಿ ಇರುವ ಸರ್ಕಾರಿ ಯೋಜನೆಗಳು ಉದ್ಯೋಗಾವಕಾಶಗಳು ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಯಾವ ಕ್ರಮಕೈಗೊಂಡಿದೆ? | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ/ಅರೆ ಅಲೆಮಾರಿ/ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಗಳ ಅಭಿವೃದ್ಧಿಗಾಗಿ ಪರಿಶಿಷ್ಟ ಜಾತಿಯ ಅಲೆಮಾರಿ/ಅರೆ ಅಲೆಮಾರಿ ಸಮುದಾಯಗಳ ಅಭಿವೃದ್ಧಿ ಕೋಶ 2016 ರಲ್ಲಿ ರಚನೆಯಾಗಿರುತ್ತದೆ. ತದ ನಂತರ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ನಿಗಮವನ್ನು 2022 ರಲ್ಲಿ ಸ್ಥಾಪಿಸಲಾಗಿದೆ.<br><br>ಪರಿಶಿಷ್ಟ ಜಾತಿ ಅಲೆಮಾರಿ ಸಮುದಾಯದ ಒಟ್ಟು 51 ಜಾತಿ ಮತ್ತು ಪರಿಶಿಷ್ಟ ಪಂಗಡದ 23 ಜಾತಿ ಮತ್ತು ಅರಣ್ಯ ಆದಿವಾಸಿ 25 ಸಮುದಾಯಗಳಿಗೆ ವಿವಿಧ ಯೋಜನೆಯಡಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಹಾಗೂ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದವರಿಗೆ ನಿವೇಶನ ರಹಿತರಿಗೆ ನಿವೇಶನವನ್ನು ಒದಗಿಸಿ ಮನೆ ನಿರ್ಮಾಣ ಕೈಗೊಳ್ಳುವುದು ಮತ್ತು ನಿವೇಶನ ಹೊಂದಿದವರಿಗೆ ಮನೆ ನಿರ್ಮಾಣ ಕೈಗೊಳ್ಳಲು ರಾಜೀವ್‌ಗಾಂಧಿ ವಸತಿ ನಿಗಮದಿಂದ ರೂ.2.00 ಲಕ್ಷ ಸಹಾಯಧನ ಒದಗಿಸಲಾಗುತ್ತಿದೆ. ಕಲಬುರಗಿ ಜಿಲ್ಲೆಗೆ 2021-22 ನೇ ಸಾಲಿನಲ್ಲಿ ವಸತಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯದವರಿಗೆ ಗುರಿಗಳನ್ನು ನಿಗಧಿಪಡಿಸಿ ಮಂಜೂರು ಮಾಡಿರುವ ವಿವರವು ಈ ಕೆಳಗಿನಂತಿದೆ. |

| ಕ್ರ.ಸಂ | ಸಮುದಾಯ | ಭೌತಿಕ ಗುರಿ | ಭೌತಿಕ ಸಾಧನೆ |
|---|---|---|---|
| 1 | ಪರಿಶಿಷ್ಟ ಜಾತಿ | 414 | 205 |
| 2 | ಪರಿಶಿಷ್ಟ ಪಂಗಡ | 133 | 36 |
| | **ಒಟ್ಟು** | **547** | **241** |

---3

| | | |
|---|---|---|
| | | ನಿಗಮದಿಂದ ಈ ಕೆಳಕಂಡ ಯೋಜನೆಗಳನ್ನು ಫಲಾನುಭವಿಗಳಿಗೆ ಉದ್ಯೋಗವಕಾಶ ಕಲ್ಪಿಸುವ ಸಲುವಾಗಿ ಸೌಲಭ್ಯಗಳನ್ನು ಒದಗಿಸಲು ಅನುಷ್ಠಾನಗೊಳಿಸಲಾಗಿದೆ.<br><br>1) ಸ್ವಯಂ ಉದ್ಯೋಗ ನೇರಸಾಲ<br>2) ಉದ್ಯಮಶೀಲತಾ ಯೋಜನೆ,<br>3) ಸ್ವಾವಲಂಭಿ ಸಾರಥಿ ಯೋಜನೆ<br>4) ಮೈಕ್ರೋ ಕ್ರೆಡಿಟ್ ಯೋಜನೆ<br>5) ಭೂ ಒಡೆತನ ಯೋಜನೆ<br>6) ಗಂಗಾ ಕಲ್ಯಾಣ ಯೋಜನೆ<br><br>ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗುವ ಜಿಲ್ಲಾನುಷ್ಠಾನ ಆಯ್ಕೆ ಸಮಿತಿಯಲ್ಲಿ ಜಿಲ್ಲಾವಾರು ಗುರಿ ನಿಗದಿಪಡಿಸಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಈ ಮೇಲ್ಕಂಡ ಸೌಲಭ್ಯವನ್ನು ಒದಗಿಸಲಾಗುತ್ತಿದೆ.<br><br>ಇದಲ್ಲದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದವರಿಗೆ ಅರಿವು ಜಾಗೃತಿ ಶಿಬಿರ ಮತ್ತು ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಹಮ್ಮಿ ಕೊಳ್ಳಲಾಗುತ್ತಿದೆ.<br><br>ನಿಗಮವು ಕಲಬುರಗಿ ಜಿಲ್ಲೆಗೆ ವಿವಿಧ ಯೋಜನೆಗಳಡಿ ಅಲೆಮಾರಿ ಸಮುದಾಯವರಿಗೆ ಕಳೆದ 03 ವರ್ಷಗಳಲ್ಲಿ ಒದಗಿಸಿರುವ ಸೌಲಭ್ಯದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |

**ಸಕಇ 269 ಪಕವಿ 2025**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1539 ಕ್ಕೆ ಅನುಬಂಧ**

## ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಕಲಬುರಗಿ ಜಿಲ್ಲೆಗ ಕಳೆದ 3 ವರ್ಷಗಳಲ್ಲಿ ವಿವಿಧ ಯೋಜನೆಗಳ ಪ್ರಗತಿ ವಿವರ

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆ | 2022-23 | | 2023-24 | | 2024-25 | |
|---|---|---|---|---|---|---|---|
| | | ಭೌತಿಕ ಸಾಧನೆ | ಆರ್ಥಿಕ ಸಾಧನೆ | ಭೌತಿಕ ಸಾಧನೆ | ಆರ್ಥಿಕ ಸಾಧನೆ | ಭೌತಿಕ ಸಾಧನೆ | ಆರ್ಥಿಕ ಸಾಧನೆ |
| 1 | ಸ್ವಯಂ ಉದ್ಯೋಗ ಯೋಜನೆ | 17 | 17.00 | 17 | 17.00 | 24 | 24.00 |
| 2 | ಉದ್ಯಮಶೀಲತಾ ಯೋಜನೆ | 05 | 10.00 | 01 | 2.00 | 02 | 4.00 |
| 3 | ಸ್ವಾವಲಂಬಿ ಸಾರಥಿ ಯೋಜನೆ | 03 | 10.50 | 02 | 8.00 | 03 | 12.00 |
| 4 | ಮೈಕ್ರೊ ಕ್ರೆಡಿಟ್ ಯೋಜನೆ | 02 | 5.00 | 00 | 0.00 | 00 | 0.00 |
| 5 | ಭೂ ಒಡೆತನ ಯೋಜನೆ | 03 | 16.80 | 00 | 0.00 | 00 | 0.00 |
| 6 | ಗಂಗಾ ಕಲ್ಯಾಣ ಯೋಜನೆ | 00 | 0.00 | 00 | 0.00 | 00 | 0.00 |
| | **ಒಟ್ಟು** | **30** | **59.30** | **20** | **27.00** | **29** | **40.00** |